| ನೋಂದಣಿ ಸಂಖ್ಯೆ egistration No: | | | | | | | | | | | |
|---|---|---|---|---|---|---|---|---|---|---|---|

2 – 2024

ವಿಷಯ ಸಂಕೇತ Subject Code **16**

# ಐಚ್ಛಿಕ ಕನ್ನಡ / OPTIONAL KANNADA

ಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 54) ಗರಿಷ್ಠ ಅಂಕಗಳು: 80

ıe : 3 Hours 15 Minutes] [Total No. of Questions : 54] [Max. Marks : 80

**ಚನೆಗಳು:**

**ವಿಭಾಗ 'ಅ'** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

ಸೂಚನೆಗೆ ಅನುಗುಣವಾಗಿ ಉತ್ತರಿಸಿ.

## ಅ–ವಿಭಾಗ

(ಅ) ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. **(5 × 1 = 5)**

1) ಬೆಕ್ಕು ಇದಕ್ಕಾಗಿ ಹೊಂಚಿ ಬಂದಿತು.

(a) ನೀರಿಗಾಗಿ

(b) ಹಾಲಿಗಾಗಿ

(c) ಬೆಣ್ಣೆಗಾಗಿ

(d) ಮೊಸರಿಗಾಗಿ

2) ಮಣ್ಣಿನ ಭೋಗಿ ಇವನು

(a) ತರುಣ

(b) ತಿರುಕ

(c) ರೈತ

(d) ಜಲಗಾರ

3) ಜಗದ ಪಾಪವ ನುಂಗುವವನು

(a) ಶಿವ

(b) ತಿರುಕ

(c) ಯುವಕ

(d) ಕಬ್ಬಿಗ

4) ಜೋಯಿಸರು ದೇಗುಲದ ಒಳಗೆ ಇವರನ್ನು ಸೇರಿಸರು.

(a) ಭಟ್ಟ

(b) ಪಾರ್ವ

(c) ಜಲಗಾರ

(d) ತರುಣ

5) ತೆರಳು, ಯುವಕನೆ, ತೆರಳು, ಶಿವನ ಗುಡಿಯೊಳಗರಸು; ನಾನು ಪುಡಿಯೊಳಗವನನರಸುವೆನು.

ಇಲ್ಲಿ ಜಲಗಾರ ಶಿವನನ್ನು ಎಲ್ಲಿ ಕಾಣುತ್ತಾನೆ?

(a) ಗುಡಿಯಲ್ಲಿ (b) ಜಾತ್ರೆಯಲ್ಲಿ

(c) ಮಣ್ಣಿನಲ್ಲಿ (d) ಪೂಜೆಯಲ್ಲಿ

ಸರಿಯಾದ ಉತ್ತರವನ್ನು ಆಯ್ಕೆಮಾಡಿ ಖಾಲಿಜಾಗವನ್ನು ಭರ್ತಿಮಾಡಿ:– **(5 × 1 = 5)**

6) 'ತಾಮರಸ' ಪದದ ಅರ್ಥ ..............

7) 'ನಿತ್ಯ' ಪದದ ತದ್ಭವ ರೂಪ ............

8) 'ಹೊರಗಣ' ಪದದ ವಿರುದ್ಧ ಪದ ...............

9) ಇದು ದ್ವಿರುಕ್ತಿಗೆ ಉದಾಹರಣೆ .........

10) 'ಅರುಣೋದಯ' ಪದದ ಬಿಡಿಸಿ ಬರೆವರೂಪ ..........

(ಒಳಗಣ, ನಿಚ್ಚ, ಅರುಣ + ಉದಯ, ನಲಿನಲಿದು, ಕಮಲ, ಪರಾಜಯ)

ಹೊಂದಿಸಿ ಬರೆಯಿರಿ:– **(5 × 1 = 5)**

11) ಊರು – ನಿರಾಧಾರ

12) ಗಾವಿಲ – ತೊಡೆ, ಗ್ರಾಮ

13) ವಿದ್ಯೆ – ಶಿವ

14) ಆಧಾರ – ಬಿಜ್ಜೆ

15) ಕಪರ್ದಿ – ದಡ್ಡ, ಮೂರ್ಖ

– ಭಾನು

ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ:– **(5 × 1 = 5)**

16) ಯಾರ ಇಂದ್ರಿಯಗಳು ಕ್ಷೀಣಿಸಿದವು?

17) ಶಿವ ಮೆಚ್ಚಿದ ವಾದ್ಯ ಯಾವುದು?

18) ಯಾರಿಗೆ ಬುದ್ಧಿ ಹೇಳಿದರೆ ಫಲವಿಲ್ಲ?

19) ನಾಲಿಗೆ ಇಲ್ಲದೆ ಉಲಿಯುವುದು ಯಾವುದು?

20) ಕುಲಕೋಟಿಯನ್ನು ಉದ್ಧರಿಸುವವಳು ಯಾರು?

## ಆ–ವಿಭಾಗ

ಕೆಳಗಿನ **ನಾಲ್ಕು** ಪ್ರಶ್ನೆಗಳಿಗೆ **ಎರಡು ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(4 × 2 = 8)**

21) ಸಂಗೀತ ಪ್ರಪಂಚಕ್ಕೆ ಯಾವ ಯಾವ ವಂಶದ ರಾಜರುಗಳು ಹಾಜರಿದ್ದರು?

22) ಅರ್ಜುನನು ಯಾರಿಂದ ಯಾವ ಅಸ್ತ್ರವನ್ನು ಪಡೆದನು?

23) ಮಡಕೆಗಳನ್ನು ಮಾಡುವಾಗ ಗುಂಡಯ್ಯನಿಗೆ ಯಾವುದರ ಕಡೆ ಲಕ್ಷ್ಯವಿರಲಿಲ್ಲ ?

24) ಆನೆ ಹಾಗೂ ಕುರಿಗಳು ಕಬ್ಬನ್ನು ಮೆಲ್ಲುವ ಪರಿ ಹೇಗೆ?

25) ಮಧ್ಯಮ ಹಾಗೂ ಅಧಮರು ಯಾರು?

26) ಸಂಸಾರದ ಬಂಧನವು ಸಡಿಲವಾಗುವುದು ಯಾವಾಗ?

ಕೆಳಗಿನ **ನಾಲ್ಕು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(4 × 3 = 12)**

27) ದೇಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ.

28) ಸೌಜನ್ಯ ವಿದೂರನಾದೆನ್.

29) ಮಡಕೆಯ ವಾದ್ಯಂ ಸಾಲ್ಗೆಂದೆನುತಿರೆ.

30) ನಿನ್ನಯ ಕರುಣವಾಕೆಯ ಹರಣ.

31) ಮೃದುನುಡಿಯಿಂ ಲೋಕಪೂಜ್ಯತೆ.

32) ಸುಳ್ಳು ಈ ಮಾತು ಎನಬೇಡ.

ಕೆಳಗಿನ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 4 = 8)**

33) ಕಿರಾತನೆ ಸಾಕ್ಷಾತ್ ಶಿವನೆಂದಾಗ ಅರ್ಜುನನಲ್ಲಿ ಮೂಡಿದ ಭಾವನೆಗಳು ಯಾವುವು? ವಿವರಿಸಿ.

34) ಮಿಮಳೆ ಒಡ್ಡುವ ತರ್ಕಗಳನ್ನು ಅಲ್ಲಮಪ್ರಭು ಹೇಗೆ ಸಾಧಾರವಾಗಿ ಖಂಡಿಸುತ್ತಾನೆ? ವಿವರಿಸಿ.

35) ಸರ್ವಜ್ಞನ ತ್ರಿಪದಿಗಳಲ್ಲಿ ತೋರುವ ಲೋಕನೀತಿಯನ್ನು ವಿವರಿಸಿ.

36) ಸತಿ-ಪತಿ ಧರ್ಮದ ಬಗ್ಗೆ ಸಂಚಿಯ ಹೊನ್ನಮ್ಮನ ಅಭಿಪ್ರಾಯವೇನು?

. ಕೆಳಗಿನ **ಒಂದು** ಪದ್ಯಕ್ಕೆ ಭಾವಾರ್ಥವನ್ನು ಬರೆಯಿರಿ : **(1 × 4 = 4)**

37) ತನುರೂಪವಿಭವ ಯೌವನ
ಧನ ಸೌಭಾಗ್ಯಾಯುರಾದಿಗಳ್ಗೆಣೆ ಕುಡುಮಿಂ
ಚಿನ ಪೊಳೆಪು ಮುಗಿಲ ನೆವಿಲಿಂ
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ

38) ತರುಣಿಗೆ ಪತಿ ದೈವ ವಿದ್ಯಾರ್ಥಿಗೆಣ್ಣಿಸೆ
ಗುರುದೈವ ಸೇವಕ ಜನಕೆ
ಧರಣೇಶ ದೈವ ಧರೆಯ ಜನರೆಲ್ಲರ್ಗೆ
ಸಿರಿರಂಗ ನೀನಧಿದೈವ

## ಇ–ವಿಭಾಗ

ಕೆಳಗಿನ **ಒಂದು** ಪ್ರಶ್ನೆಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(1 × 2 = 2)**

39) ಬೆಕ್ಕಿನ ಸ್ವರವನ್ನು ಆಲಿಸಿದವರು ಯಾರು?

40) ನಾಗಿಯನ್ನು ನೋಡಿ ನೀರು ಏನು ಹೇಳಿತು?

ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1 × 4 = 4)**

41) ನಾಗಿಯು ತೇರನೋಡಲು ಹೊರಟ ಪ್ರಸಂಗವನ್ನು ವರ್ಣಿಸಿರಿ.

42) ನಾಗಿಯಕಥೆ ಪದ್ಯದಲ್ಲಿ ಬಂದಿರುವ ಬೆಕ್ಕಿನ ಸಾಂಕೇತಿಕ ರೂಪವನ್ನು ಚರ್ಚಿಸಿರಿ.

## ಈ–ವಿಭಾಗ

ಕೆಳಗಿನ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ : **(2 × 2 = 4)**

43) ಧರೆಗೆ ಎಲ್ಲಿಯವರೆಗೆ ಸುಖವಿಲ್ಲ?

44) ರೈತ ಶಿವಗುಡಿಯಿಂದ ಏನೇನು ತಂದಿದ್ದಾನೆ?

45) ಜಲಗಾರ ಯಾವುದನ್ನು ಒಲ್ಲೆ ಎನ್ನುತ್ತಾನೆ?

ಕೆಳಗಿನ **ಎರಡು** ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2 × 3 = 6)**

16) ಒಂದು ದಿನವಾದರೂ ವಿಶ್ರಾಂತಿ ಇರಲಿ.

17) ಗುಡಿಗಳು ಪಾಪಿಗಳ ಭೋಗಿಗಳ ಗೂಡುಗಳು!

18) ಅಂಜದಿರು, ಸೋದರನೆ ನಾನಿನ್ನ ಬಂಧು!

ಕೆಳಗಿನ **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 4 = 4)**

19) ಭೂದೇವಿಯ ಉಷಃಕಾಲ ಚಿತ್ರಣವನ್ನು ಚಿತ್ರಿಸಿ.

50) ಶಿವನ ಆಭರಣಗಳು ಯಾವುವು? ವಿವರವಾಗಿ ಬರೆಯಿರಿ?

## ಉ–ವಿಭಾಗ

ಕೆಳಗಿನ **ಒಂದು** ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ : **(1 × 4 = 4)**

51) ರಸಭಂಗಭಯದಿನಿಂದ್ರಂ

ಪೊಸತೊಂದಾದೊರೆಯ ಪಾತ್ರಮಂ ತಂದನುಸಂ

ಧಿಸುವುದುಮದನಣಮಖಿಯ

ಳ್ಕೆ ಸುರಾಸುರ ಸಮಿತಿಗಾದುದಿಲ್ಲಾ ಕ್ಷಣದೊಳ್

52) ಗುಂಡನ ನಿಳಯದ ಮುಂದಂ ನಿಂದಿರೆ

ಗುಂಡಯ್ಯಂ ಸುಖದಿಂ ಬಾರಿಸುತಿರೆ.

ಕೆಳಗಿನವುಗಳಲ್ಲಿ **ಒಂದಕ್ಕೆ** ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ : **(1 × 4 = 4)**

53) ಸೌದಾಮಿನಿವೊಲ್ ಭೋಂಕನೆ ಸುರಕಾಮಿನಿ

ರಂಗದೊಳದೃಶ್ಯೆಯಪ್ಪುದುಮಾಗಳ್

54) ಮೂಡಣದ ಬಾನೆಡೆಯೊಳು ಓಕುಳಿಯನ್ನು
ಚೆಲ್ಲುತ್ತ ಅರುಣೋದಯವು ಮೂಡುತಿದೆ.